# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 785/2024

**ಸಾಕ್ಷಿಯನ್ನು ದಿಃ 02.06.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಡಾ. ಉಮೇಶ್ | ಸಿಡಬ್ಲ್ಯೂಃ 7 | ಪಿಡಬ್ಲ್ಯೂಃ 6 |
| ತಂದೆಯ ಹೆಸರು | ಬೋರಯ್ಯ | | |
| ವಯಸ್ಸು | 48 ವರ್ಷ | | |
| ಕೆಲಸ | ವೈದ್ಯಾಧಿಕಾರಿ ಸಾರ್ವಜನಿಕ ಆಸ್ಪತ್ರೆ, ಹುಣಸೂರು | | |
| ವಾಸಸ್ಥಳ | ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ನಾನು 04.08.2017 ರಿಂದ ಇಲ್ಲಿಯವರೆಗೂ ಹುಣಸೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ13.05.2024 ರಂದು ಬೆಳಿಗ್ಗೆ 11.16 ಕ್ಕೆ ಚಾಸಾ-2 ರವರು ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ನನ್ನ ಮುಂದೆ ಹಾಜರಾಗಿದ್ದು ಅವರನ್ನು ಪರೀಕ್ಷಿಸಿದಾಗ ಈ ಕೆಳ ಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಎಡಭಾಗದ ಸೊಂಟದ ಮೇಲೆ ನೋವಿತ್ತು.
2. ಎದೆಯ ಎಡಭಾಗದಲ್ಲಿ 3 cm ತರಚಿದ ಗಾಯವಿತ್ತು.
3. ಮುಖ, ಎದೆ ಮತ್ತು ಹೊಟ್ಟೆಯ ಮೇಲೆ ನೋವಿತ್ತು.

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಹಾಗೂ ಸದರಿ ಗಾಯಗಳು ತಾಜಾ ಗಾಯಗಳಾಗಿದ್ದು, ಆ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ಈಗ ನೋಡುತಿತದ್ದು, ಈಗಾಗಲೇ ನಿಪಿ-12 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-12(ಬಿ) ಎಂದು ಗುರುತಿಸಲಾಯಿತು.

ಅದೇ ದಿನ ಬೆಳಿಗ್ಗೆ 11.30 ಕ್ಕೆ ಚಾಸಾ-1 ರವರು ಹಲ್ಲೆಗೆ ಒಳಗಾದ ಹಿನ್ನೆಲೆಯಲ್ಲಿ ನನ್ನ ಮುಂದೆ ಹಾಜರಾಗಿದ್ದು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತವೆ.

1. ಮುಖದ ಎಡಭಾಗದಲ್ಲಿ ಮತ್ತು ಕಿವಿಯ ಪಕ್ಕದಲ್ಲಿ ನೋವಿತ್ತು.

2. ಎಡ ರೆಪ್ಪೆಯ ಮಧ್ಯಭಾಗದಲ್ಲಿ ನೋವಿತ್ತು.
3. ಎದೆಯ ಎಡಭಾಗ ಮತ್ತು ಎರಡು ಮೊಣಕಾಲುಗಳ ಮೇಲೆ ನೊವಿತ್ತು.

ನನ್ನ ಅಭಿಪ್ರಾಯದಲ್ಲಿ ಮೇಲೆ ಹೇಳಿದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳಾಗಿದ್ದು, ಹಾಗೂ ಸದರಿ ಗಾಯಗಳು ತಾಜಾ ಗಾಯಗಳಾಗಿದ್ದು, ಆ ಬಗ್ಗೆ ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ಅದನ್ನು ಈಗ ನೋಡುತಿತದ್ದು, ಈಗಾಗಲೇ ನಿಪಿ-11 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-11(ಬಿ) ಎಂದು ಗುರುತಿಸಲಾಯಿತು. ಒಬ್ಬ ವ್ಯಕ್ತಿಗೆ ದೊಣ್ಣೆ ಮತ್ತು ತೂಕದ ಬಟ್ಟುಗಳಿಂದ ಹೊಡೆದರೆ ನಿಪಿ-11 ಮತ್ತು 12 ರಲ್ಲಿ ಕಾಣಿಸಿದ ಗಾಯಗಳಾಗುವ ಸಾಧ್ಯತೆ ಇದೆ.

## ಪಾಟೀ ಸವಾಲುಃ ಆರೋಪಿ ಪರ ಶ್ರೀ. ಬಿ.ಎಸ್.ವೈ ವಕೀಲರಿಂದಃ

ನಿಪಿ-7ರ ಗಾಯದ ಪ್ರಮಾಣ ಪತ್ರದಲ್ಲಿ ಗಾಯಗಳ ವಯಸ್ಸನ್ನು ನಮೂದಿಸಿಲ್ಲ. 2 ರಿಂದ 5ನೇ ಗಾಯಗಳನ್ನು ಚಾಸಾ-1 ರವರು ನೋವು ಇದೆ ಎಂದು ಹೇಳಿದ್ದರಿಂದ ನಾನು ಬರೆದಿದ್ದೇನೆ ಎಂದರೆ 2 ಮತ್ತು 4ನೇ ಗಾಯಗಳ ಬಗ್ಗೆ ನಾನು ಖಚಿತಪಡಿಸಿಕೊಂಡಿದ್ದೇನೆ. 3 ಮತ್ತು 5ನೇ ಗಾಯಗಳನ್ನು ಚಾಸಾ-1 ನೋವು ಇದೆ ಎಂದು ಹೇಳಿದ್ದರಿಂದ ನಮೂದಿಸಿದ್ದೇನೆ. ಚಾಸಾ-1 ರವರು ನನ್ನ ಮುಂದೆ ಸಂಜೆ 6 ಗಂಟೆಗೆ ಗಲಾಟೆಯಾಗಿದೆ ಎಂದು ಹೇಳಿದ್ದಾರೆ. ನನ್ನ ಪ್ರಕಾರ ಸದರಿ ಗಾಯಗಳು ತಾಜಾ ಗಾಯಗಳಾಗಿದ್ದು, ಅವುಗಳ ವಯಸ್ಸು ಸುಮಾರು 4 ಗಂಟೆಯಾಗಿರಬಹುದು. ಆ ಬಗ್ಗೆ ನಿಪಿ-7 ಮತ್ತು 8 ರಲ್ಲಿ ನಮೂದಿಸಲು ನನಗೆ ತೊಂದರೆ ಇರಲಿಲ್ಲ. ಒಬ್ಬ ವ್ಯಕ್ತಿ ಸ್ವತಃ ಉಗುರಿನಿಂದ ತನ್ನ ದೇಹಕ್ಕೆ ಗೀರಿಕೊಂಡಾಗ ನಿಪಿ-7 ರಲ್ಲಿ ಕಾಣಿಸಿದ 1ನೇ ಗಾಯವಾಗುವ ಸಾಧ್ಯತೆ ಇದೆ ಎಂದರೆ ಸರಿ. ರಾತ್ರಿ ಮಲಗಿದಾಗ ದಿಂಬು ಅಥವಾ ಹಾಸಿಗೆ ಏರುಪೇರಾದರೇ 2 ರಿಂದ 5ನೇ ಗಾಯಗಳು ಆಗುವ ಸಾಧ್ಯತೆ ಇದೆಯೇ ಎಂದರೆ 3 ಮತ್ತು 5ನೇ ಗಾಯಗಳು ಆಗುವ ಸಾಧ್ಯತೆ ಇಲ್ಲ. 2 ಮತ್ತು 4ನೇ ಗಾಯಗಳು ಆಗಬಹುದು. 3 ಮತ್ತು 5ನೇ ಗಾಯಗಳನ್ನು ನಾನು ಖಚಿತಪಡಿಸಿಕೊಳ್ಳದೇ ಚಾಸಾ-1 ರವರ ಹೇಳಿಕೆಯ ಮೇರೆಗೆ ಬರೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ರೀತಿಯ ಪರೀಕ್ಷೆ ಮಾಡದೇ ಚಾಸಾ-1 ರವರಿಗೆ ಅನುಕೂಲವಾಗಲೀ ಎಂದು ನಿಪಿ-7ರ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟ ಸಲಹೆಯ ಮೇರೆಗೆ 3 ಮತ್ತು 5ನೇ ಗಾಯಗಳ ಬಗ್ಗೆ ಚಾಸಾ-1 ರವರು ಹೆಚ್ಚಿನ ಚಿಕಿತ್ಸೆ ಪಡೆದುಕೊಳ್ಳದೇ ಇರುವ ಕಾರಣ ಅವರಿಗೆ ಅಂತಹ

ಗಾಯಗಳು ಆಗದೇ ಇದ್ದರೂ ಸಹ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.